**ಶ್ರೀ ಎಂ. ಟಿ. ಕೃಷ್ಣೇಗೌಡ ಬಿನ್ ತಿಮ್ಮೇಗೌಡ ಇವರು ಸರ್ವೆ ಸಂಖ್ಯೆ1, ಮುದಗನೂರು ಕಾವಲ್ ಗ್ರಾಮ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ ಇಲ್ಲಿ 15 ಎಕರೆ ವಿಸ್ತೀರ್ಣದ ಗಣಿಗಾರಿಕೆ ಪ್ರದೇಶವನ್ನು ಹೊಂದಿರುವ ಕಟ್ಟಡ ಕಲ್ಲು (ಎಂ ಸ್ಯಾಂಡ್) & ಮುರ್‍ರಂ ಗಣಿ ಪ್ರದೇಶದಲ್ಲಿ ಕಟ್ಟಡ ಕಲ್ಲು (ಎಂ ಸ್ಯಾಂಡ್– 6,00,000 ಟಿ.ಪಿ.ಎ) ಮತ್ತು ಮುರ್‍ರಂ– 6,34,500 ಟನ್ ಮೊದಲನೇ ವರ್ಷದಲ್ಲಿ ಉತ್ಪಾದಿಸಲು ಉದ್ದೇಶಿಸಿರುವ ಹಿನ್ನೆಲೆಯಲ್ಲಿ ದಿನಾಂಕ 15–10–2019 ರಂದು ಪೂರ್ವಾಹ್ನ 11.00 ಗಂಟೆಗೆ ಅಪರ ಜಿಲ್ಲಾಧಿಕಾರಿಗಳು(ಪ್ರ), ಹಾಸನ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡಾವಳಿಗಳು.**

<table>
<tr><td colspan="2">ಪರಿಸರ ಕುರಿತಾದ ಸಾರ್ವಜನಿಕ ಆಲಿಕೆ ಸಭೆಯ ಸ್ಥಳ</td><td>ಶ್ರೀ ಎಂ. ಟಿ. ಕೃಷ್ಣೇಗೌಡ ಬಿನ್ ತಿಮ್ಮೇಗೌಡ, ಸರ್ವೆ ಸಂಖ್ಯೆ1, ಮುದಗನೂರು ಕಾವಲ್ ಗ್ರಾಮ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.</td></tr>
<tr><td colspan="2">ಹಾಜರಿದ್ದ ಪರಿಸರ ಸಾರ್ವಜನಿಕ ಆಲಿಕೆ ಸಮಿತಿಯ ಸದಸ್ಯರುಗಳ ವಿವರ</td><td>ಪದನಾಮ</td></tr>
<tr><td>1.</td><td>ಶ್ರೀ. ಹೆಚ್. ಎಲ್. ನಾಗರಾಜ್,<br>ಅಪರ ಜಿಲ್ಲಾಧಿಕಾರಿಗಳು(ಪ್ರ), ಹಾಸನ ಜಿಲ್ಲೆ, ಹಾಸನ</td><td>ಅಧ್ಯಕ್ಷರು</td></tr>
<tr><td>2</td><td>ಶ್ರೀ.ಎ.ಉದಯ ಕುಮಾರ್, ಹಿರಿಯ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ವಲಯ ಕಛೇರಿ, ಮೈಸೂರು.</td><td>ಸದಸ್ಯರು</td></tr>
<tr><td>3.</td><td>ಶ್ರೀ ಈ ಪ್ರಕಾಶ್, ಪರಿಸರ ಅಧಿಕಾರಿ, ಹೆಚ್ಚುವರಿ ಪ್ರಭಾರ, ಪ್ರಾದೇಶಿಕ ಕಛೇರಿ, ಹಾಸನ.</td><td>ಸದಸ್ಯ ಸಮಾವೇಷಕರು</td></tr>
<tr><td colspan="3">ಹಾಜರಿದ್ದ ಇತರ ಅಧಿಕಾರಿಗಳ ವಿವರವನ್ನು <u>ಅನುಬಂಧ–3</u> ರಲ್ಲಿ ಲಗತ್ತಿಸಲಾಗಿದೆ)</td></tr>
<tr><td>4.</td><td colspan="2">ಶ್ರೀ.ರವಿಚಂದ್ರ ಕೆ, ಉಪ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ಪ್ರಾದೇಶಿಕ ಕಛೇರಿ, ಹಾಸನ</td></tr>
<tr><td>5</td><td colspan="2">ಕುಮಾರಿ. ತಂಜೀಲಾ, ಸಹಾಯಕ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ಪ್ರಾದೇಶಿಕ ಕಛೇರಿ, ಹಾಸನ</td></tr>
<tr><td colspan="3">ಶ್ರೀ ಎಂ. ಟಿ. ಕೃಷ್ಣೇಗೌಡ ಬಿನ್ ತಿಮ್ಮೇಗೌಡ ಇವರ ಉದ್ದೇಶಿತ ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳು</td></tr>
<tr><td>1.</td><td colspan="2">ಶ್ರೀ ಎಂ. ಟಿ. ಕೃಷ್ಣೇಗೌಡ, ಮಾಲೀಕರು</td></tr>
<tr><td>2.</td><td colspan="2">ಶ್ರೀ. ಧನರಾಜ್, ಮೆ// ಹೊರೈಜಾನ್ ವೆಂಚರ್ಸ್, ಎನ್ವಿರಾಮೆಂಟಲ್ ಕನ್ಸಲ್ಟೆಂಟ್ಸ್, ಬೆಂಗಳೂರು.</td></tr>
<tr><td colspan="3">ಹಾಜರಿದ್ದ ಸಾರ್ವಜನಿಕರ ವಿವರವನ್ನು <u>ಅನುಬಂಧ–2</u> ರಲ್ಲಿ ಲಗತ್ತಿಸಲಾಗಿದೆ</td></tr>
</table>

**<u>ಪೀಠಿಕೆ:</u>**

**ಶ್ರೀ ಎಂ. ಟಿ. ಕೃಷ್ಣೇಗೌಡ ಬಿನ್ ತಿಮ್ಮೇಗೌಡ, ಸರ್ವೆ ಸಂಖ್ಯೆ1, ಮುದಗನೂರು ಕಾವಲ್ ಗ್ರಾಮ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ ಇಲ್ಲಿ 15 ಎಕರೆ ವಿಸ್ತೀರ್ಣದ ಗಣಿಗಾರಿಕೆ ಪ್ರದೇಶವನ್ನು ಹೊಂದಿರುವ ಕಟ್ಟಡ ಕಲ್ಲು (ಎಂ ಸ್ಯಾಂಡ್) & ಮುರ್‍ರಂ ಗಣಿ ಪ್ರದೇಶದಲ್ಲಿ ಕಟ್ಟಡ ಕಲ್ಲು (ಎಂ ಸ್ಯಾಂಡ್– 6,00,000 ಟಿ.ಪಿ.ಎ) ಮತ್ತು ಮುರ್‍ರಂ– 6,34,500 ಟನ್ ಮೊದಲನೇ ವರ್ಷದಲ್ಲಿ ಉತ್ಪಾದಿಸಲು** ಉದ್ದೇಶಿಸಿರುತ್ತಾರೆ.

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಇವರು ಪರಿಸರ (ಸಂರಕ್ಷಣೆ) ಕಾಯ್ದೆ 1986 ರಡಿಯಲ್ಲಿ ದಿನಾಂಕ:14.09.2006 ರಲ್ಲಿ ಜಾರಿಗೊಳಿಸಿರುವ ಪರಿಸರ ಆಘಾತ ಅಧ್ಯಯನದ ಅಧಿಸೂಚನೆ (ತಿದ್ದುಪಡಿ ದಿನಾಂಕ:01.12.2009) ರನ್ವಯ ಯೋಜನಾ ಪ್ರವರ್ತಕರು ಸದರಿ ಯೋಜನೆಗೆ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.

ಸದರಿ ಉದ್ದೇಶಿತ ಯೋಜನೆಯು ಮೇಲೆ ತಿಳಿಸಿದ ಅಧಿಸೂಚನೆಯನ್ವಯ ಸದರಿ ಉದ್ದೇಶಿತ ಯೋಜನೆಯ ವಿಸ್ತೀರ್ಣವು 5 ಹೆಕ್ಟೇರ್‌ಗಿಂತ ಜಾಸ್ತಿಯಿರುವುದರಿಂದ ಪ್ರವರ್ಗ–ಬಿ1 (Category-B1) ರಡಿಯಲ್ಲಿ ಒಳಪಡುವುದರಿಂದ ರಾಜ್ಯದಲ್ಲಿ ಸ್ಥಾಪಿತವಾಗಿರುವ ರಾಜ್ಯ ಪರಿಸರ ಆಘಾತ ನಿರ್ಧರಣಾ ಪ್ರಾಧಿಕಾರದಿಂದ (State Environmental Impact Assessment Authority) ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.

ಆ ಮೇರೆಗೆ ಯೋಜನಾ ಪ್ರವರ್ತಕರು ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರಕ್ಕೆ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರು ಸಲ್ಲಿಸಿರುವ ಅರ್ಜಿಯನ್ನು ರಾಜ್ಯ ಪರಿಸರ ಆಘಾತ ನಿರ್ಧರಣಾ ಪ್ರಾಧಿಕಾರದ ಅಡಿಯಲ್ಲಿ ಬರುವ ರಾಜ್ಯ ಪರಿಸರ ಮೌಲ್ಯ ನಿರ್ಣಯ ಸಮಿತಿ (State Level Expert Appraisal Committee)ಯು ಪರಿಶೀಲಿಸಿ ದಿನಾಂಕ 19–06–2019 ರಂದು ಷರತ್ತುಬದ್ಧ ನಿಬಂಧನೆ (Terms of Reference) ಗಳನ್ನು ನೀಡಿರುತ್ತಾರೆ. ಈ ಷರತ್ತುಬದ್ಧ ನಿಬಂಧನೆಗಳ ಅನ್ವಯ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸುವುದು ಕಡ್ಡಾಯವಾಗಿರುತ್ತದೆ.

ಯೋಜನಾ ಪ್ರವರ್ತಕರು ಷರತ್ತುಬದ್ಧ ನಿಬಂಧನೆಗಳನ್ನು ಪಾಲಿಸುವ ಸಲುವಾಗಿ ಮೆ.ಹೊರೈಜಾನ್ ವೆಂಚರ್ಸ್, ಬೆಂಗಳೂರು ಇವರು ತಯಾರಿಸಿದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನ ವರದಿ ಮತ್ತು ಕಾರ್ಯಕಾರಿ ಸಾರಾಂಶವನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಸಿದ್ಧಪಡಿಸಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಿಕೊಡಲು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಗೆ ದಿನಾಂಕ 26.06.2019 ರಂದು ಮನವಿ ಸಲ್ಲಿಸಿರುತ್ತಾರೆ.

ಯೋಜನಾ ಪ್ರವರ್ತಕರ ಸದರಿ ಮನವಿಯ ಮೇರೆಗೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಜಿಲ್ಲಾಧಿಕಾರಿಗಳು, ಹಾಸನ ಇವರಿಗೆ ಪರಿಸರ ಸಾರ್ವಜನಿಕ ಆಲಿಕಾ ಸಭೆ ನಡೆಸಲು ಸೂಕ್ತ ದಿನಾಂಕ ಹಾಗೂ ಸಮಯವನ್ನು ನೀಡಲು ದಿನಾಂಕ 26.07.2019ರ ಪತ್ರದ ಮೂಲಕ ಕೋರಲಾಗಿರುತ್ತದೆ. ಆ ಮೇರೆಗೆ ಜಿಲ್ಲಾಧಿಕಾರಿಗಳು ದಿನಾಂಕ:15.10.2019 ರಂದು ಪೂರ್ವಾಹ್ನ 11.00 ಗಂಟೆಗೆ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸಮ್ಮತಿ ಸೂಚಿಸಿರುತ್ತಾರೆ. ಈ ಸಭೆಗೆ ಪೂರಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ವಿಜಯ ಕರ್ನಾಟಕ (ಕನ್ನಡ) ಹಾಗೂ ಡೆಕ್ಕನ್ ಹೆರಾಲ್ಡ್ (ಆಂಗ್ಲ) ಗಳಲ್ಲಿ ದಿನಾಂಕ 13–09–2019 ರಂದು ಪತ್ರಿಕಾ ಪ್ರಕಟಣೆ ನೀಡಿ ಈ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಅನಿಸಿಕೆ/ಆಕ್ಷೇಪಣೆ/ಸೂಚನೆ/ ಸಲಹೆ/ಅಭಿಪ್ರಾಯಗಳನ್ನು ಲಿಖಿತವಾಗಿ 30 ದಿನಗಳ ಒಳಗೆ ಸಲ್ಲಿಸಲು ಕೋರಲಾಗಿರುತ್ತದೆ. ಮುಂದುವರೆದು, ಹಾಸನ ಜಿಲ್ಲೆಯ ಪ್ರಮುಖ ಸ್ಥಳೀಯ ದಿನಪತ್ರಿಕೆಯಾದ "ಜನತಾ ಮಾಧ್ಯಮ" ದಲ್ಲಿಯೂ ಸಹಾ ದಿನಾಂಕ: 13.10.2019 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯನ್ನು ನೀಡಲಾಗಿರುತ್ತದೆ.

ಸದರಿ ಯೋಜನೆಗೆ ಸಂಬಂಧಿಸಿದಂತೆ ಯೋಜನಾ ಪ್ರವರ್ತಕರು ಸಲ್ಲಿಸಿದ್ದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನದ ವರದಿ ಮತ್ತು ಕಾರ್ಯಕಾರಿ ಸಾರಂಶದ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸಾರ್ವಜನಿಕರ ಪರಾಮರ್ಶೆಗೆ ಇಡಲಾಗಿತ್ತು.

- ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ,
- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯತ್, ಹಾಸನ ಜಿಲ್ಲೆ, ಹಾಸನ,
- ಜಿಲ್ಲಾ ಕೈಗಾರಿಕಾ ಕೇಂದ್ರ, ಹಾಸನ,
- ಗ್ರಾಮ ಪಂಚಾಯತಿ ಕಾರ್ಯಾಲಯ, ಹೆಗ್ಗಡಹಳ್ಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
- ಪಟ್ಟಣ ಪಂಚಾಯತ್, ಅರಕಲಗೂಡು, ಹಾಸನ ಜಿಲ್ಲೆ.
- ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,ಹಾಸನ ಜಿಲ್ಲೆ, ಹಾಸನ.
- ಅರಣ್ಯ ಮತ್ತು ಪರಿಸರ ಮಂತ್ರಾಲಯ, ದಕ್ಷಿಣ ವಲಯ, ಕೋರಮಂಗಲ, ಬೆಂಗಳೂರು.
- ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು

ಯೋಜನಾ ಪ್ರದೇಶದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ದೇಶಿತ ಉದ್ದಿಮೆಯ ಸ್ಥಾಪನೆ ಕುರಿತು ಹಾಗು ಸಾರ್ವಜನಿಕ ಆಲಿಕಾ ಸಭೆ ನಡೆಯುವ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಕರ ಪತ್ರಗಳನ್ನು ಹಂಚಲಾಗಿರುತ್ತದೆ.

ಈ ಮೇಲೆ ತಿಳಿಸಿದ ಕಛೇರಿಗಳಲ್ಲಿ ಉದ್ದೇಶಿತ ಯೋಜನೆಗೆ ಸಂಭಂದಿಸಿದಂತೆ ಯಾವುದೇ ಲಿಖಿತ ಪತ್ರಗಳು ಸ್ವೀಕೃತವಾಗಿರುವುದಿಲ್ಲ.

ಮೇಲೆ ತಿಳಿಸಿದ ಅಧಿಸೂಚನೆಯಲ್ಲಿನ ಎಲ್ಲಾ ವಿಧಿವಿಧಾನಗಳನ್ನು ಕ್ರಮಬದ್ಧವಾಗಿ ನಿಯಮಾನುಸಾರ ಪಾಲಿಸಿ ದಿನಾಂಕ 15-10-2019 ರಂದು ಪೂರ್ವಾಹ್ನ 11:00 ಗಂಟೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಅಪರ ಜಿಲ್ಲಾಧಿಕಾರಿಗಳು(ಪ್ರ), ಹಾಸನ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲಾಯಿತು.

**ಸಭೆಯ ನಡವಳಿಗಳು**

ಸದಸ್ಯ ಸಮಾವೇಷಕರು ಹಾಗೂ ಪರಿಸರ ಅಧಿಕಾರಿಗಳಾದ ಶ್ರೀ ಈ. ಪ್ರಕಾಶ್(ಪ್ರ) ರವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿ, ಸಭಾ ಅಧ್ಯಕ್ಷರಾದ ಅಪರ ಜಿಲ್ಲಾಧಿಕಾರಿಗಳನ್ನು(ಪ್ರ) ಸಭೆ ನಡೆಸಿಕೊಡುವಂತೆ ಕೋರಿದರು.

ಮುಂದುವರೆದಂತೆ, ಸದರಿ ಯೋಜನೆಯ ಬಗ್ಗೆ ಪರಿಸರ ಸಾರ್ವಜನಿಕ ಆಲಿಕಾ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರಿಗೆ ವಿವರಣೆ ನೀಡುವಂತೆ ಯೋಜನಾ ಪ್ರವರ್ತಕರಿಗೆ ಸಭೆಯ ಅಧ್ಯಕ್ಷರು ಸೂಚಿಸಿದರು.

ಅದರಂತೆ, **ಶ್ರೀ ಎಂ. ಟಿ. ಕೃಷ್ಣೇಗೌಡ** ಪರವಾಗಿ ಶ್ರೀ ಧನರಾಜ್ ಮತ್ತು ಶ್ರೀ ಸಚಿನ್, ಮೆ// ಹೊರೈಜಾನ್ ವೆಂಚರ್ಸ್, ಎನ್ವಿರಾಮೆಂಟಲ್ ಕನ್ಸಲ್ಟೆಂಟ್ಸ್, ಬೆಂಗಳೂರು ಇವರು ಉದ್ದೇಶಿತ ಯೋಜನೆಗೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನ ವರದಿಯ ಕಾರ್ಯಕಾರಿ ಸಾರಾಂಶಗಳಾದ ಯೋಜನೆ ಪ್ರಸ್ಥಾವನೆ, ಸರ್ಕಾರದ ಮಂಜೂರಾತಿಗಳು, ಸ್ಥಳೀಯ ನಕ್ಷೆ, ಅಧ್ಯಯನ ಕ್ಷೇತ್ರದ ನಕ್ಷೆಗಳು, ಭೂ ಬಳಕೆಯ ವಿವರಗಳು, ಸ್ಥಳದ ಪ್ರಮುಖ

ಲಕ್ಷಣಗಳು, ಮೂಲಭೂತ ಬೇಡಿಕೆಗಳು ಮತ್ತು ಸೌಕರ್ಯಗಳು, ಮಳೆ ನೀರು ನಿರ್ವಹಣೆ, ಪರಿಸರದ ಅಂಶಗಳಾದ ವಾಯು, ಜಲ, ಶಬ್ದ, ಭೂ ಪರಿಸರ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ, ಪರಿಸರ ನಿರ್ವಹಣ ಯೋಜನೆ, ಪರಿಸರ ಸಂರಕ್ಷಣಾ ಕಾರ್ಯಗಳ ಆಯವ್ಯಯ ಒಟ್ಟು ಪರಿಸರ ನಿರ್ವಹಣಾ ಯೋಜನೆಗಳನ್ನೊಳಗೊಂಡ ವಿವರಗಳನ್ನು ಪವರ್ ಪಾಯಿಂಟ್ ಮೂಲಕ ಸಭೆಗೆ ಮಂಡಿಸಿದರು. ಮಂಡನೆಯಲ್ಲಿ ಪ್ರಸ್ಥಾಪಿಸಿರುವ ಪ್ರಮುಖ ಅಂಶಗಳು ಈ ಕೆಳಕಂಡಂತಿರುತ್ತದೆ.

1. ಪ್ರಸ್ತಾವಿತ ಗಣಿಗಾರಿಕಾ ಪ್ರದೇಶವು ಒಟ್ಟು 15 ಎಕರೆ ವಿಸ್ತೀರ್ಣ ಹೊಂದಿದ್ದು ಅದರಲ್ಲಿ 12–16 ಎಕರೆಯನ್ನು ಗಣಿಗಾರಿಕೆಗೆ, ರಸ್ತೆಗಾಗಿ 0–04 ಎಕರೆ, ತ್ಯಾಯ ನಿರ್ವಹಣೆಗೆ 0–04, ಖನಿ ದಾಸ್ತಾನಿಗೆ 0–06 ಎಕರೆ ಮತ್ತು 2–10 ಎಕರೆ ಸುರಕ್ಷಾ ಪಟ್ಟಿಗೆ ಮೀಸಲಿಡಲಾಗಿದೆ.
2. ಪ್ರಸ್ಥಾವಿತ ಗಣಿಗಾರಿಕೆಯಿಂದ ಸುಮಾರು 67 ಜನರಿಗೆ ನೇರ (ಗುತ್ತಿಗೆ ಕೆಲಸಗಾರರು ಸೇರಿದಂತೆ) ಉದ್ಯೋಗ ಸೃಷ್ಟಿಸುತ್ತದೆ.
3. ಸದರಿ ಯೋಜನೆಗೆ ನೀರಿನ ಮೂಲವು ಬೋರ್ ವೆಲ್ ಆಗಿದ್ದು ಒಟ್ಟು ಬಳಕೆಯು 16.5 ಕಿಲೋ ಲೀಟರುಗಳಾಗಿದ್ದು ಇದರಲ್ಲಿ ಮುಖ್ಯವಾಗಿ ಗೃಹಬಳಕೆ (3.015 ಕೆ.ಎಲ್.ಡಿ), ಧೂಳಿನ ನಿಯಂತ್ರಣ (9 ಕೆ.ಎಲ್.ಡಿ) ಮತ್ತು ಗಿಡಮರಗಳಿಗೆ (4.5 ಕೆ.ಎಲ್.ಡಿ)ನೀರುಣಿಸುವುದಕ್ಕಾಗಿ ಉಪಯೋಗಿಸಲು ಉದ್ದೇಶಿಸಲಾಗಿದೆ.
4. ಯೋಜನೆಯ ಸುತ್ತಮುತ್ತಲಿನ ಹಳ್ಳಿಗಳ ಅಭಿವೃದ್ಧಿ ದೃಷ್ಟಿಯಿಂದ ಮುಂಬರುವ ವರ್ಷಗಳಲ್ಲಿ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ (Corporate Social Responsibilities) ಕ್ಷೇತ್ರದಲ್ಲಿ ವಿವಿಧ ಉಪಕ್ರಮಗಳಿಗಾಗಿ ವರ್ಷವೊಂದಕ್ಕೆ ರೂ. 2.0 ಲಕ್ಷ ಗಳನ್ನು ವಿನಿಯೋಗಿಸುವುದಾಗಿ ಹಾಗೂ ಈ ಉಪಕ್ರಮಗಳು ಕೌಶಲ್ಯ ಅಭಿವೃದ್ಧಿ, ಆರೋಗ್ಯ ಮತ್ತು ನೈರ್ಮಲ್ಯ, ಶಿಕ್ಷಣ ಮತ್ತು ಜಲ ನಿರ್ವಹಣೆಗಾಗಿ ಮೀಸಲಿಟ್ಟಿರುವುದಾಗಿ ತಿಳಿಸಿದರು.
5. ಪರಿಸರ ನಿರ್ವಹಣಾ ವ್ಯವಸ್ಥೆಗಾಗಿ ಯೋಜನೆಯನ್ನು ರೂಪಿಸಿದ್ದು ಆ ಪ್ರಕಾರ ಮಾಲಿನ್ಯ ನಿಯಂತ್ರಣ ವ್ಯವಸ್ಥೆಗಳಿಗಾಗಿ ಒಟ್ಟು ರೂ.35.50 ಲಕ್ಷ ಗಳನ್ನು ಬಳಸುವುದಾಗಿ ತಿಳಿಸಿದರು.

ಸಭೆಯ ಅಧ್ಯಕ್ಷರು ಈ ಉದ್ದೇಶಿತ ಯೋಜನೆಯ ಬಗ್ಗೆ ಪರಿಸರ ಕುರಿತಾಗಿ ಯಾವುದೇ ಕಳಕಳಿ/ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳು ಯಾವುದಾದರೂ ಇದ್ದಲ್ಲಿ ಸಭೆಗೆ ಮಂಡಿಸುವಂತೆ ಸಭೆಯಲ್ಲಿ ನೆರೆದಿದ್ದ ಸಾರ್ವಜನಿಕರನ್ನು ಕೋರಿದರು.

ಆ ಮೇರೆಗೆ ಸಾರ್ವಜನಿಕರು ಯೋಜನೆಯ ಬಗ್ಗೆ ತಮ್ಮ ಕಳಕಳಿ/ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ಈ ಕೆಳಕಂಡಂತೆ ಮಂಡಿಸಿದರು.

1. **ಶ್ರೀ ರಾಜೇಗೌಡ, ಮುದಗನೂರು ಗ್ರಾಮ, ಅರಕಲಗೂಡು ತಾಲ್ಲೂಕು, ಹಾಸನ ಇಲ್ಲೆ:**
   ಪಕ್ಕದ ಮೀನಿನವನಾದ ನಾನು ಸುಮಾರು ವರ್ಷಗಳಿಂದ ವ್ಯವಸಾಯ ಮಾಡಿಕೊಂಡು ಬಂದಿದ್ದು ಬೆಳೆ ಎಲ್ಲಾ ಚೆನ್ನಾಗಿ ಬರುತ್ತಿದ್ದು ಉದ್ದೇಶಿತ ಯೋಜನೆಯಿಂದ ಯಾವುದೇ ತೊಂದರೆ ಇಲ್ಲವೆಂದು ತಿಳಿಸಿದರು.
2. **ಶ್ರೀ ಆಂಜನೇಯ ನಾಗೇನ ಹಳ್ಳಿ, ಅಧ್ಯಕ್ಷರು ಮತ್ತು ಸಂಸ್ಥಾಪಕರು, ಸಮಗ್ರ ಪರಿವರ್ತನ ಸಮುದಾಯ, ಹಾವೇರಿ ಜಿಲ್ಲೆ:**
   ಸದರಿ ಉದ್ದೇಶಿತ ಯೋಜನೆಯಿಂದ ಉದ್ಯೋಗಗಳು ಸಿಕ್ಕಿ ಗ್ರಾಮಾಭ್ಯುದಯ ಆಗುತ್ತದೆಂದು ತಿಳಿಸಿ ಲಿಖಿತವಾಗಿ ನನ್ನ ಸಲಹೆ/ಅಭಿಪ್ರಾಯವನ್ನು ಸಲ್ಲಿಸುತ್ತಿದ್ದೇನೆಂದು ಮಾನ್ಯ ಅಧ್ಯಕ್ಷರಿಗೆ ಸಲ್ಲಿಸಿದರು.

3. **ಶ್ರೀ ಬಿ.ವಿ.ರೆಡ್ಡಿ, ಅಧ್ಯಕ್ಷರು, ಶಕ್ತಿ ಎನ್‌ವಿರಾನ್ ಮೆಂಟ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ, ಬಳ್ಳಾರಿ:** ಸದರಿ ಯೋಜನೆಯ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆಯಿಂದ ಸಮುದಾಯ ಅಭಿವೃದ್ದಿಯಾಗುವುದಾಗಿ ತಿಳಿಸಿ ಲಿಖಿತವಾಗಿ ನನ್ನ ಸಲಹೆ/ಅಭಿಪ್ರಾಯವನ್ನು ಸಲ್ಲಿಸುತ್ತಿದ್ದೇನೆಂದು ಮಾನ್ಯ ಅಧ್ಯಕ್ಷರಿಗೆ ಸಲ್ಲಿಸಿದರು.

4. **ಶ್ರೀಮತಿ ಮಂಜುಳ, ಜಿ.ಕೆ. ಎಜುಕೇಶನ್ ಅಂಡ್ ರೂರಲ್ ಅರ್ಬನ್ ಡೆವಲಪ್‌ಮೆಂಟ್ ಸೊಸೈಟಿ(ರಿ), ಚಿತ್ರದುರ್ಗ:** ಈ ಯೋಜನೆಯಿಂದ ಉದ್ಯೋಗಾವಕಾಶ ಸಿಗುತ್ತದೆ, ಗಿಡಮರ ಮತ್ತು ಬೆಳೆಗೆ ತೊಂದರೆಯಾಗದಂತೆ ಹೆಚ್ಚಿನ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಿಳಿಸಿ ಲಿಖಿತವಾಗಿ ನನ್ನ ಸಲಹೆ/ಅಭಿಪ್ರಾಯವನ್ನು ಸಲ್ಲಿಸುತ್ತಿದ್ದೇನೆಂದು ಮಾನ್ಯ ಅಧ್ಯಕ್ಷರಿಗೆ ಸಲ್ಲಿಸಿದರು.

5. **ಶ್ರೀ ಕೃಷ್ಣೇಗೌಡ, ಗ್ರಾಮ ಪಂಚಾಯತ್ ಸದಸ್ಯರು, ಮುದಗನೂರು, ಹೆಗ್ಗಡಹಳ್ಳಿ ಗ್ರಾಮ ಪಂಚಾಯತ್, ಅರಕಲಗೂಡು:** ಯೋಜನಾದಾರರು ಕಳೆದ ಹಲವಾರು ವರ್ಷದಿಂದ ಗಣಿಗಾರಿಕೆ ನಡೆಸುತ್ತಿದ್ದು ಇಲ್ಲಿಯವರೆಗೆ ಯಾವುದೇ ತೊಂದರೆ ಇಲ್ಲವೆಂದು ತಿಳಿಸಿದರು.

6. **ರಾಜಯ್ಯ, ಮುದುಗನೂರು ಗ್ರಾಮ, ಅರಕಲಗೂಡು:**
   ರಸ್ತೆಯ ಪಕ್ಕದಲ್ಲೇ ಜಮೀನಿದ್ದು ಬೆಳೆಗಳಿಗೆ ಯಾವುದೇ ತೊಂದರೆ ಆಗಿಲ್ಲವೆಂದು ತಿಳಿಸಿದರು.

ಈ ಸಭೆಯಲ್ಲಿ ನೆರೆದಿದ್ದ ಶ್ರೀ ಎ. ಸುದರ್ಶನ್, ಚೇಯುತ ರೂರಲ್ ಅಂಡ್ ಎನ್‌ವಿರಾನ್‌ಮೆಂಟ್ ಡೆವಲಪ್‌ಮೆಂಟ್ ಸೊಸೈಟಿ, ತೆಲಂಗಾಣ ರಾಜ್ಯ, ಶ್ರೀ ಸತೀಶ್, ಸಾಕ್ಷಿ ರೂರಲ್ ಅಂಡ್ ಅರ್ಬನ್ ಡೆವಲಪ್‌ಮೆಂಟ್ ಸೊಸೈಟಿ, ವಾರಂಗಳ್, ತೆಲಂಗಾಣ ರಾಜ್ಯ ಇವರು ಲಿಖಿತ ಮನವಿಯನ್ನು ಅಧ್ಯಕ್ಷರಿಗೆ ಸಲ್ಲಿಸಿದರು. ಲಿಖಿತವಾಗಿ ಸಲ್ಲಿಸಿದವರ ಮನವಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.

ಆ ನಂತರ ಸಭೆಯ ಅಧ್ಯಕ್ಷರು, ಸಾರ್ವಜನಿಕರು ಮೌಖಿಕವಾಗಿ ತಿಳಿಸಿದ ಹಾಗು ಲಿಖಿತವಾಗಿ ಸಲ್ಲಿಸಿದ ಕಳಕಳಿ/ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ನಡವಳಿಯಲ್ಲಿ ದಾಖಲಿಸಿ ಛಾಯಾಚಿತ್ರ ಹಾಗು ವಿಡಿಯೋ ದಾಖಲಾತಿಗಳೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮೂಲಕ ರಾಜ್ಯ ಪರಿಸರ ಆಘಾತ ನಿರ್ಧರಣಾ ಪ್ರಾಧಿಕಾರದ ಅಡಿಯಲ್ಲಿ ಬರುವ ರಾಜ್ಯ ಪರಿಸರ ಮೌಲ್ಯ ನಿರ್ಣಯ ಸಮಿತಿ (State Level Expert Appraisal Committee) ಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗುವುದೆಂದು ತಿಳಿಸಿದರು.

ಅಂತಿಮವಾಗಿ ಸದಸ್ಯ-ಸಮಾವೇಶಕರಾದ ಶ್ರೀ.ಈ ಪ್ರಕಾಶ್ ರವರು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದಿಸಿದ ನಂತರ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ಡಾ. ಹೆಚ್ ಎಲ್ ನಾಗರಾಜ್)**
**ಅಪರ ಜಿಲ್ಲಾಧಿಕಾರಿಗಳು(ಪ್ರ)**
**ಹಾಸನ ಜಿಲ್ಲೆ, ಹಾಸನ**

# ಅನುಬಂಧ

## (ದ್ವಿಪ್ರತಿಗಳು)

1. ಸಾರ್ವಜನಿಕರ ಒಂದು ಲಿಖಿತ ಹೇಳಿಕೆ/ ಆಕ್ಷೇಪಣೆಯನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.
2. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ.
3. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-3** ರಲ್ಲಿ ಲಗತ್ತಿಸಲಾಗಿದೆ.
4. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಕ್ರಿಯೆಯ ಛಾಯಾಚಿತ್ರವಿರುವ ಡಾಕ್ಯುಮೆಂಟ್ ಪ್ರತಿಯನ್ನು **ಅನುಬಂಧ-4** ರಲ್ಲಿ ಲಗತ್ತಿಸಲಾಗಿದೆ.
5. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಚಾರಕ್ಕಾಗಿ ದಿ:13.10.2019 ರಂದು ಕರಪತ್ರಗಳನ್ನು ವಿತರಿಸಲಾದ ಪ್ರತಿಗಳನ್ನು **ಅನುಬಂಧ-5** ರಲ್ಲಿ ಲಗತ್ತಿಸಲಾಗಿದೆ.
6. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಡಿ.ವಿ.ಡಿ ಗಳ ಪ್ರತಿಯನ್ನು **ಅನುಬಂಧ-6** ರಲ್ಲಿ ಲಗತ್ತಿಸಲಾಗಿದೆ.

(ಡಾ. ಹೆಚ್ ಎಲ್ ನಾಗರಾಜ್)
**ಅಪರ ಜಿಲ್ಲಾಧಿಕಾರಿಗಳು(ಪ್ರ)**
ಹಾಸನ ಜಿಲ್ಲೆ, ಹಾಸನ